

# ಮಂಕಿಪಾಕ್ಸ್ ಮಾರಣಾಂತಿಕವಲ್ಲ

**ಕೊರೊನಾ ಸೋಂಕಿನಿಂದ ಕೊಂಚ ಮುಕ್ತಿ ಪಡೆಯುತ್ತಿದ್ದಂತೆ ಇದೀಗ ಮಂಕಿಪಾಕ್ಸ್ ಸೋಂಕಿನ ಭೀತಿ ಜಾಗತಿಕವಾಗಿ ಎದುರಾಗಿದೆ. ಕಾಯಿಲೆ ಹರಡುವ ತೀವ್ರತೆಯನ್ನು ಮನಗಂಡ ವಿಶ್ವ ಆರೋಗ್ಯ ಸಂಸ್ಥೆ ಇದನ್ನು 'ಜಾಗತಿಕ ಆರೋಗ್ಯ ತುರ್ತು ಸಮಸ್ಯೆ' ಎಂದು ಘೋಷಿಸಿದೆ. ಈ ಕಾಯಿಲೆ ಮಾರಣಾಂತಿಕವಲ್ಲ ಎನ್ನುವುದು ಸಮಾಧಾನದ ಸಂಗತಿ.**

**■ ಉಮಾ ಅನಂತ್**

ಚಿಕನ್‌ಪಾಕ್ಸ್, ಸ್ಮಾಲ್ ಪಾಕ್ಸ್.. ಇದೀಗ ಮಂಕಿಪಾಕ್ಸ್! ಜಗತ್ತಿನಾದ್ಯಂತ ಮತ್ತೆ ಆತಂಕ, ಭೀತಿ ಹುಟ್ಟಿಸಿದ ಈ ಮಂಕಿಪಾಕ್ಸ್, ವೈರಾಣು ಮೂಲಕ ವೇಗವಾಗಿ ಹರಡುವ ಮತ್ತೊಂದು ಸಾಂಕ್ರಾಮಿಕ ರೋಗ. ಜಾಗತಿಕವಾಗಿ 75 ದೇಶಗಳಿಗೂ ಹೆಚ್ಚು ಭಾಗಗಳಲ್ಲಿ ಆವರಿಸಿರುವ ಈ ಮಂಕಿಪಾಕ್ಸ್ ಅನ್ನು 'ಜಾಗತಿಕ ಆರೋಗ್ಯ ತುರ್ತು ಸಮಸ್ಯೆ' ಎಂದು ವಿಶ್ವ ಆರೋಗ್ಯ ಸಂಸ್ಥೆ ಘೋಷಿಸಿದ್ದು, ಕಳವಳಕ್ಕೆ ಕಾರಣವಾಗಿದೆ.

ಸಿಡುಬಿನಂತೆಯೇ ಕಾಣುವ ಜೊತೆಗೆ ಇದೇ ಲಕ್ಷಣಗಳನ್ನೂ ಹೊಂದಿರುವ ಮಂಕಿಪಾಕ್ಸ್ ಮಾರಣಾಂತಿಕವಲ್ಲ. ಜೊತೆಗೆ ಸಿಡುಬಿಗಿಂತಲೂ ಸೌಮ್ಯವಾಗಿರುತ್ತದೆ ಎನ್ನುತ್ತದೆ ವೈದ್ಯಲೋಕ.

ಮಂಕಿಪಾಕ್ಸ್ ವೈರಸ್ ಕಾಂಗೊ, ನೈಜೀರಿಯಾ, ಐವರಿಕೋಸ್ಟ್ ಮುಂತಾದ ಪಶ್ಚಿಮ ಆಫ್ರಿಕಾ ದೇಶಗಳಲ್ಲಿ ಮೊದಲ ಬಾರಿಗೆ ಪತ್ತೆಯಾಯಿತು. ಮೊದಲು ಇಲಿಯಿಂದ ನಾಯಿ, ಮಂಗಗಳಿಗೆ ಹರಡಿ ಬಳಿಕ ಮಂಗಗಳಿಗೆ ಈ ವೈರಾಣು ಹರಡಿದೆ. ಆದರೆ ಮಂಗಗಳ ಗುಂಪಿನಲ್ಲಿ ವೈರಸ್ ಪತ್ತೆಯಾದ ಕಾರಣ 'ಮಂಕಿಪಾಕ್ಸ್' ಎಂಬ ಹೆಸರು ಬಂದಿದೆ ಎನ್ನುತ್ತಾರೆ ತಜ್ಞರು.

ವೈರಸ್‌ಗಳಲ್ಲಿ ಎರಡು ವಿಧ. ಆರ್‌ಎನ್‌ಎ ವೈರಸ್ (ಕೋವಿಡ್ ವೈರಾಣು) ಹಾಗೂ ಡಿಎನ್‌ಎ ವೈರಸ್. ಮಂಕಿಪಾಕ್ಸ್ ಡಿಎನ್‌ಎ ವೈರಸ್ ಗುಂಪಿಗೆ ಸೇರಿದೆ.

## ಲಕ್ಷಣಗಳೇನು?

ಜ್ವರ, ತಲೆನೋವು, ಬೆನ್ನು ನೋವು, ಮೈಕೈ ನೋವು, ಸುಸ್ತು ಮುಂತಾದವು ಮಂಕಿಪಾಕ್ಸ್‌ನ ಪ್ರಮುಖ ಲಕ್ಷಣ. ಗದ್ದದ ಬಳಿ, ಕಂಕುಳಿನಲ್ಲಿ ಸಣ್ಣ ದದ್ದುಗಳು ಕಾಣಿಸುತ್ತವೆ. ರೋಗ ಬಂದಾಗ ಈ ದದ್ದುಗಳು ದೊಡ್ಡದಾಗಿ ನೀರು ಗುಳ್ಳೆಗಳ ರೀತಿ ಆಗುತ್ತದೆ. ಜ್ವರ ತೀವ್ರವಾಗುತ್ತಿದ್ದಂತೆ ಗುಳ್ಳೆಗಳು ಕೆಂಪಾಗಿ ಮತ್ತಷ್ಟು ದೊಡ್ಡದಾಗುತ್ತವೆ. ಮುಖ, ಅಂಗೈ, ಅಂಗಾಲು, ಬಾಯಿ, ಕಣ್ಣು ಎಲ್ಲೆಡೆ ವ್ಯಾಪಿಸುತ್ತವೆ.

'ಕಾಯಿಲೆ ಎರಡರಿಂದ ನಾಲ್ಕು ವಾರ ಕಾಲ ಇರುತ್ತದೆ. ಚಿಕಿತ್ಸೆಗೆ ಬೇಗ ಸ್ಪಂದಿಸುವ ರೋಗ ಇದು. ಅನಿಯಂತ್ರಿತ ಮಧುಮೇಹ, ಸ್ಟೀರಾಯ್ಡ್ ಬಳಸಬೇಕಾದವರಲ್ಲಿ, ಕ್ಯಾನ್ಸರ್ ರೋಗಿಗಳಲ್ಲಿ, ರೋಗ ನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ, ಈ ರೋಗ ಹೆಚ್ಚು ಬಾಧೆ ಕೊಡುತ್ತದೆ. ನೀರು ಗುಳ್ಳೆ ಒಡೆದು ವ್ರಣವಾಗಬಹುದು. ಈ ವೈರಾಣು ಶ್ವಾಸಕೋಶ ಸೇರಿದರೆ ಜ್ವರ ತೀವ್ರ ಸ್ವರೂಪ ಪಡೆದು ನ್ಯುಮೋನಿಯಾ ಉಂಟಾಗುವ ಅಪಾಯವೂ ಇದೆ' ಎಂದು ಹೇಳುತ್ತಾರೆ ಶಿವಮೊಗ್ಗದಲ್ಲಿ ವೈರಾಣು ತಜ್ಞ ಹಾಗೂ ಜನರಲ್ ಫಿಸೀಷಿಯನ್ ಆಗಿರುವ ಡಾ. ಶ್ರೀಕಾಂತ್ ಹೆಗಡೆ.

'ಸಿಡುಬಿಗೂ ಮಂಕಿಪಾಕ್ಸ್‌ಗೂ ಸಂಬಂಧ ಇದೆ. ಹೀಗಾಗಿ ಸಿಡುಬು ವ್ಯಾಕ್ಸೀನ್ ಅನ್ನು ಮಂಕಿಪಾಕ್ಸ್‌ಗೂ ಬಳಸಬಹುದು. ಆದರೆ ಸಿಡುಬು ರೋಗ ಸಂಪೂರ್ಣವಾಗಿ ನಿರ್ನಾಮ ಆದ ಕಾರಣ 1980ರಿಂದ ಸಿಡುಬು ವ್ಯಾಕ್ಸೀನ್ ತಯಾರಿಕೆ ನಿಲ್ಲಿಸಲಾಗಿದೆ. ಆದರೂ ರಷ್ಯಾ, ಅಮೆರಿಕ ಎರಡು ದೇಶಗಳಲ್ಲಿ ಸಿಡುಬು ವ್ಯಾಕ್ಸೀನ್‌ನ ಔಷಧಿ ಮೂಲವನ್ನು ಸಂರಕ್ಷಿಸಿ ಇಟ್ಟಿರುವ ಕಾರಣ ಹೊಸದಾಗಿ ಮಂಕಿಪಾಕ್ಸ್‌ಗೆ ಲಸಿಕೆ ಕಂಡುಹಿಡಿಯುವ ಅಗತ್ಯವಿಲ್ಲ' ಎಂದು ಮಾಹಿತಿ ನೀಡುತ್ತಾರೆ ಈ ವೈದ್ಯರು.

## ಹರಡುವುದು ಹೇಗೆ?

ಈ ವೈರಸ್ ಶರೀರದ ಪರಸ್ಪರ ಸಂಪರ್ಕದಿಂದ ಹರಡುತ್ತದೆ. ಮುಖ್ಯವಾಗಿ ಮಂಗ, ಇಲಿ,